**ಉಪನಿರ್ದೇಶಕರು (ಆಡಳಿತ) ರವರ ಕಚೇರಿ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು**

---

**2022–23 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**

**ವಿಷಯ: 01 K–ಪ್ರಥಮ ಭಾಷೆ – ಕನ್ನಡ**

**ಗರಿಷ್ಠ ಅಂಕಗಳು: 100** **ಸಮಯ : 03.15ಗಂಟೆಗಳು**

***************************************************************************************

**ಅಭ್ಯಾಸ ಪತ್ರಿಕೆ–6**

***************************************************************************************

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಕೊಡಲಾಗಿದೆ ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 6x1=6**

1.ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕಾಕ್ಷರಗಳ ಸಂಖ್ಯೆ.

ಎ) 13 ಬಿ) 10

ಸಿ) 02 ಡಿ) 05

2. 'ಪ್ರೀತಿಯ ಹಣತೆಯ ಹಚ್ಚೋಣ' ಈ ವಾಕ್ಯದಲ್ಲಿಯ ಕ್ರಿಯಾಪದವು ಈ ರೂಪದಲ್ಲಿದೆ.

ಎ) ಸಂಭವನಾರ್ಥಕ ಬಿ) ವಿಧ್ಯರ್ಥಕ

ಸಿ) ನಿಷೇದಾರ್ಥಕ ಡಿ) ಆತ್ಮಾರ್ಥಕ

3. 'ಮಹರ್ಷಿ' ಈ ಪದವು ಈ ಸಂಧಿಗೆ ಉದಾಹರಣೆಯಾಗಿದೆ.

ಎ) ಲೋಪಸಂಧಿ ಬಿ) ಗುಣಸಂಧಿ

ಸಿ) ಆಗಮಸಂಧಿ ಡಿ) ಆದೇಶಸಂಧಿ

4. ಮತ್ತು, ಅಥವಾ, ಆದ್ದರಿಂದ, ಊ,ಉಂ, ಅಲ್ಲದೆ ಇತ್ಯಾದಿ ಪದಗಳು ಅವ್ಯಯದ ಈ ಗುಂಪಿಗೆ ಸೇರಿವೆ.

ಎ) ಭಾವಸೂಚಕಾವ್ಯಯ ಬಿ) ಕ್ರಿಯಾರ್ಥಕಾವ್ಯಯ

ಸಿ) ಅನುಕರಾಣಾವ್ಯಯ ಡಿ) ಸಂಬಂಧಾರ್ಥಕಾವ್ಯಯ

5. ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ

ಎ) ಅಲ್ಪವಿರಾಮ ಬಿ) ಉದ್ಧರಣ

ಸಿ) ಆವರಣ ಡಿ) ಭಾವಸೂಚಕ

6. 'ಕಂಗೆಡು' ಈ ಪದವು ಈ ಸಮಾಸಕ್ಕೆ ಉದಾಹರಣೆ.

ಎ) ಬಹುವ್ರೀಹಿ ಬಿ) ದ್ವಂದ್ವ

ಸಿ) ಕ್ರಿಯಾ ಡಿ) ಗಮಕ

**II.ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನು ಬರೆಯಿರಿ. 4x1=4**

7. ಈಗೀಗ : ದ್ವಿರುಕ್ತಿ :: ಹಾಲ್ಜೇನು: ..............................

8. ಕೋಕಿಲಾ : ಕೋಗಿಲೆ :: ವ್ಯಯ: ............................

9. ನದಿ : ರೂಢನಾಮ :: ವಿದ್ವಾಂಸ: .............................

10. ಬಳೆಗಾರ್ತಿ : ತದ್ಧಿತಾಂತನಾಮ :: ತಿನ್ನುವ: .................

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 7x1=7**

11. ಭೂಮಿಜಾತೆ ಎಂದರೆ ಯಾರು?

12. ದೇವನೂರರ ನನ್ನ ದೇವರು ಯಾರೆಂಬುದನ್ನು ಸ್ಪಷ್ಟೀಕರಿಸಿ?

13. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?

14. ಶಿವಚರಿತ್ರೆಯಲ್ಲಿ ಯಾವ ಉಲ್ಲೇಖ ಮಾಡಲಾಗಿದೆ?

15. ಬರಡಾಗಿರುವ ಕಾಡುಮೇಡುಗಳಿಗೆ ಏನಾಗಬೇಕೆಂದು ಕವಿಡಾ॥ ಜಿ.ಎಸ್.ಶೀವರುದ್ರಪ್ಪನವರು ಅಭಿಪ್ರಾಯಪಟ್ಟಿದ್ದಾರೆ?
16. ದಿನಪಸುತ ಎಂದರೆ ಯಾರು?
17. ಪೆರಿಯಾರ್ ರವರು ಹುಟ್ಟು ಹಾಕಿದ ಸಂಘಟನೆಯ ಹೆಸರೇನು?

**IV.ಕೆಳಗಿನ ಪ್ರಶ್ನೆಗಳಿಗೆ ಮೂರು– ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10x2=20**

18.ಶಬರಿ ಶ್ರೀರಾಮನ ಗುಣಗಾನಗಳನ್ನು ಹೇಗೆ ಹಾಡಿ ಹೊಗಳಿದಳು?
19.ಮನುಷ್ಯ ತನ್ನ ಒಳಿತನ್ನು ಹೇಗೆ ಸಾದಿಸಬಹುದು?
20.ಬಯಕೆ–ಈಡೇರಿಕೆ–ಧರ್ಮ ಇವುಗಳ ನಡುವಿನ ಸಂಬಂಧವನ್ನು ವಿವರಿಸಿ.
21.ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು?
22.ಭೀಷ್ಮರು ದುರ್ಯೋಧನನ್ನು ಸಂಧಿಗೆ ಒಪ್ಪಿಸಲು ಹೇಗೆ ಪ್ರಯತ್ನಿಸುತ್ತಾರೆ?
23.ರಾಜಕೀಯ ಸ್ವಾತಂತ್ರ್ಯದ ಮಹತ್ತ್ವವೇನು?
24.ಜನರಲ್ ಡಯರ್‌ನು ಜಲಿಯನ್ ವಾಲಾಬಾಗ್ನಲ್ಲಿ ಮಾಡಿಸಿದ ಪೈಶಾಚಿಕ ಕೃತ್ಯ ಎಂತಹದು?
25.ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಹೇಗೆ ಪರಿಹರಿಸಿಕೊಳ್ಳಲಾಯಿತು?
26.ಪೈಗಳ ತಮ್ಮನ ನೂಲು ಮದುವೆಯ ದಿನ ಅಂಗಳದಲ್ಲಿ ಏನೇನು ಸಿದ್ಧತೆಗಳಾಗುತ್ತಿದ್ದವು?
27.ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?

**V.ಕೆಳಗಿನ ಕವಿಗಳ/ಸಾಹಿತಿಗಳ ಜನ್ಮಸ್ಥಳ,ಕಾಲ,ಕೃತಿ, ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ 2x3=6**

28. ದೇವನೂರು ಮಹಾದೇವ
29. ಡಾ॥ಜಿ.ಎಸ್.ಶಿವರುದ್ರಪ್ಪ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ. 1x3=3**

30. ಮೇದಿನಿಯಂ ಕ್ರಮಕ್ರಮದೆ ಪರ್ವಿದುದಾತ್ತ ನಭೋವಿಭಾಗಮಾ

**VII.ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು,ಸಮನ್ವಯಗೊಳಿಸಿ. 1x3=3**

31. ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.

**VIII.ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1x3=3**

32. ಆಳಾಗಬಲ್ಲವನು ಅರಸನಾಗಬಲ್ಲ.

ಅಥವಾ

ದೇಶ ಸುತ್ತಿ ನೋಡು, ಕೋಶ ಓದಿ ನೋಡು

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6x3=18**

33. "ಪ್ರವಾಸವು ಶಿಕ್ಷಣದ ಒಂದು ಬಾಗವಾಗಿದೆ."
34. "ಮೈಸೂರು ಸಂಸ್ಥಾನಕ್ಕೆ ಮಾದರಿ ಮೈಸೂರು ಎಂಬ ಕೀರ್ತಿ ಪ್ರಾಪ್ತವಾಯಿತು."
35. "ವಿಶ್ವವ್ಯಾಪಿಶಕ್ತಿಯದೇ ದೃಶ್ಯರೂಪವಾಗಿ ಭಾವಿಸಿ ಮೂರ್ತಿಯನ್ನು ಜನರು ಪೂಜಿಸುತ್ತಾರೆ."
36. "ಬಲ್ಲರು ಯಾರಾ ಹಾಕಿದ ಹೊಂಚ."
37. "ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು."
38. "ನಿನ್ನಪದೆಸೆಯ ಬಯಸುವವನಲ್ಲ."

**X.ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1x4=4**

39. ಹಸುರಾಗಸ..............................    ಅಥವಾ    ಹೊಸಹೂವಿನ ..................................
..............................................
..............................................
................................ ಬಿಸಿಲೂ!

ಹೊಸಹೂವಿನ ..................................
.......................................................
.......................................................
............................ ಹಸುರಿಳೆಯುಸಿರೂ!

**XI.ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 1x4=4**

40.ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್
ಮಿಗೆ ನಡುಗಿ ಬೇಡ ಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ
ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು.

**XII.ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2x4=8**

41.ಸಂಪತ್ತಿನ ಅವಗುಣಗಳನ್ನು ವಿವರಿಸಿ.

ಅಥವಾ

ಸಂಪತ್ತಿನ ಮದವೇರಿದ ಅರಸರ ಸ್ವಭಾವ ಹೇಗಿರುತ್ತದೆ?

42.ದ್ರುಪದನಿಗೂ ದ್ರೋಣನಿಗೂ ನಡೆದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ.

ಅಥವಾ

ದ್ರೋಣನು ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಅಂಶಗಳನ್ನು ವಿವರಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1*4=4(2+2)**

ಪ್ರಕೃತಿ ಒಂದು ಅದ್ಭುತ ಸೃಷ್ಟಿ. ಪ್ರಕೃತಿಯಲ್ಲಿ ಕ್ರಿಮಿ, ಕೀಟ, ಪ್ರಾಣಿ, ಪಕ್ಷಿಗಳು ಒಂದು ಮಿತಿಯಲ್ಲಿದ್ದರೆ ಮಾತ್ರ ಪರಿಸರ ಸಮತೋಲನವಾಗಿರುತ್ತದೆ. ಇಲ್ಲದಿದ್ದರೆ ಪರಿಸರದಲ್ಲಿ ಅಸಮತೋಲನವುಂಟಾಗಿ ಜೀವರಾಶಿಗಳಿಗೆಲ್ಲ ಅಪಾಯ ಕಟ್ಟಿಟ್ಟದ್ದು. ಎಲ್ಲಾ ಪ್ರಾಣಿ ಪಕ್ಷಿಗಳು ತಮ್ಮ ಸಂತತಿ ವೃದ್ಧಿಸಿಕೊಳ್ಳಲು ಪಯತ್ನಿಸುತ್ತವೆ. ಆನಿಸಿದ ಎಲ್ಲಾ ಪ್ರಾಣಿ ಪಕ್ಷಿಗಳು ಉಳಿಯುವುದಿಲ್ಲ. ಪ್ರಾಣಿಗಳು ತಮ್ಮ ಬದುಕಿಗಾಗಿ ಇತರ ಪ್ರಾಣಿ ಪಕ್ಷಿಗಳೊಂದಿಗೆ ಹೋರಾಟ ನಡೆಸಿದಾಗ ಶಕ್ತಿಯುತವಾದವು ಉಳಿಯುತ್ತವೆ.ದುರ್ಬಲ ಪ್ರಾಣಿಗಳು ನಶಿಸಿ ಹೋಗುತ್ತವೆ.ಬದುಕುಳಿದ ಪ್ರಾಣಿ ಪಕ್ಷಿಗಳನ್ನು ಮಾನವ ದುರಾಸೆ,ಮೋಜು ಅಥವಾ ಹೊಟ್ಟೆಪಾಡಿಗಾಗಿ ನಾಶ ಮಾಡುತ್ತಿದ್ದಾನೆಇದರಿಂದ ಪ್ರಾಣಿಗಳ ಸಂತತಿ ಕ್ಷೀಣವಾಗುತ್ತದೆ. ಪ್ರಾಣಿಗಳಂತೆ ಸಸ್ಯಗಳೂ ತಮ್ಮವಂಶ ಮುಂದುವರಿಯಬೇಕೆಂದು ಯತ್ನಿಸುವ ವರ್ಗಕ್ಕೆ ಸೇರಿವೆ. ಕೀಟ, ವಾಯು, ನೀರು ಮೊದಲಾದುವುಗಳ ಮೂಲಕ ಬೀಜಗಳನ್ನು ವಿತರಣೆ ಮಾಡುತ್ತವೆ. ಈ ಬೀಜಗಳು ಎಲ್ಲ ಭೂಜಲ ಪ್ರದೇಶದಲ್ಲಿ ಹರಡಿಕೊಂಡರೂ ಅವು ತಮಗೆ ಅನುಕೂಲವಾದ ವಾತಾವರಣ ದೊರೆತಾಗ ಮೊಳಕೆಯೊಡೆದು ವಂಶಗಳ ಬೆಳವಣಿಗೆಗೆ ಕಾರಣವಾಗುತ್ತದೆ.ವಿಪುಲವಾದ ನೀರು,ಆರ್ದ್ರತೆ ಇರುವಲ್ಲಿ ದಟ್ಟವಾದ ಕಾಡು ಬೆಳೆದರೆ,ಬಯಲು ಪ್ರದೇಶದಲ್ಲಿ ಜಾಲಿ ಗಿಡಗಳೇವೃಕ್ಷರಾಜ ಎನಿಸಿಕೊಳ್ಳುವವು.ಇವೇ ಬೀಜಗಳು ಮರುಭೂಮಿ,ರಸ್ತೆ,ಕಟ್ಟಡಗಳ ಮೇಲೆ ಬಿದ್ದರೆ ಅವುಗಳ ಬೆಳವಣಿಗೆಗಾಗಿ ಅವಕಾಶವೇ ದೊರೆಯುವುದಿಲ್ಲವಾದ್ದರಿಂದ ನಾಶವಾಗುವವು.

ಪ್ರಶ್ನೆಗಳು:

43. ಅ) ಸಸ್ಯಗಳು ತಮ್ಮ ವಂಶವನ್ನು ಹೇಗೆ ಬೆಳೆಸುತ್ತವೆ

ಆ) ಪ್ರಾಣಿಗಳ ಸಂತತಿ ಕ್ಷೀಣಿಸಲು ಕಾರಣಗಳಾವುವು?

**XIV. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x5=5**

44)ನಿಮ್ಮನ್ನು ಕೋಲಾರ ಜಿಲ್ಲೆಯ ಮಾಲೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ಸುಮನ್ ಎಂದು ಭಾವಿಸಿಕೊಂಡು ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಚಿಕ್ಕಬಳ್ಳಾಪುರದಲ್ಲಿರುವ ನಿಮ್ಮ ತಾಯಿ ರತ್ನಮ್ಮರವರಿಗೆ ಒಂದು ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಗೌರಿಬಿದನೂರಿನ ಶಾರದಾವಿಲಾಸ ಪ್ರೌಢಶಾಲೆಯಲ್ಲಿ ಓದುತ್ತಿರುವ ಮದನ್ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆಯುವ ಶಾಲಾವಾರ್ಷಿಕೋತ್ಸವ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸುವಂತೆ ನಿಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1x5=5**

45. ಪ್ರಜ್ಞಾವಂತ ಸಮಾಜ ನಿರ್ವಹಣೆಯಲ್ಲಿ ದಿನಪತ್ರಿಕೆಗಳ ಪಾತ್ರ

ಅಥವಾ

ತ್ಯಾಜ್ಯ ವಸ್ತುಗಳ ನಿರ್ವಹಣೆ



※※※※※